**ನೂಪುರ ಭ್ರಮರಿ (ರಿ.) IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. ಮೇ- ಜೂನ್ 2022**

# ಹೊಯ್ಸಳ ಶೈಲಿಯ ಕಲ್ಯಾಣ ಮಂಟಪದ ಕುಸುರಿ

**-ಭವಾನಿ. ಜೆ, ಬೆಂಗಳೂರು**

ಗದ್ದಲದಿಂದ ತುಂಬಿರುವ ಬೆಂಗಳೂರಿನಿಂದ ಕೇವಲ ೫೪.೨ ಕಿ.ಮೀ ದೂರದಲ್ಲಿರುವ ಭೋಗ ನಂದೀಶ್ವರ ದೇವಾಲಯವು ಶಾಂತವಾಗಿದ್ದು, ಅದರ ಪುರಾತನದ ಘಮ ಮನಸ್ಸಿಗೆ ಉಲ್ಲಾಸವನ್ನು, ನೆಮ್ಮದಿಯನ್ನು ಉಂಟುಮಾಡುತ್ತದೆ. ಈ ದೇವಾಲಯವು ಸುಮಾರು ೯ನೇ ಶತಮಾನದಲ್ಲಿ ನೊಳಂಬರ ರಾಣಿ ಬನ ರತ್ನಾವಲ್ಲಿಯಿಂದ ನಿರ್ಮಿತವಾದರೂ, ಗಂಗರು, ಚೋಳರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರ ಸಾಮ್ರಾಜ್ಯದವರ ಕೊಡುಗೆ ಅಪಾರವಾಗಿಯೇ ಕಂಡಿದೆ.

ಈ ದೇವಾಲಯದಲ್ಲಿ ಪೂಜಿಸಲ್ಪಡುವ ಲಿಂಗಸ್ವರೂಪಿಯಾದ ಶಿವನನ್ನು ನಾವು ವಿವಿಧ ಅವಸ್ಥೆಗಳಲ್ಲಿ ಕಾಣಬಹುದು. ಮೊದಲನೆಯದ್ದು ಅರುಣಾಚಲೇಶ್ವರ ಎಂದರೆ ಬಾಲ್ಯಾವಸ್ಥೆಯ ಶಿವಲಿಂಗ ಎಂದು, ಎರಡನೆಯದ್ದು ಭೋಗನಂದೀಶ್ವರ ಎಂದರೆ ಯೌವ್ವನಾವಸ್ಥೆ ಶಿವಲಿಂಗ, ಮೂರನೆಯ ಉಮಾ-ಮಹೇಶ್ವರನು ಗೃಹಸ್ಥಾಶ್ರಮದ ಪ್ರತೀಕವೆಂದು ಮತ್ತು ಕೊನೆಯದ್ದು ಯೋಗ ನಂದೀಶ್ವರನು ವೈರಾಗಿಯಾಗಿ ನಂದಿಬೆಟ್ಟದ ಮೇಲೆ ಕುಳಿತಿದ್ದಾನೆ ಎಂದು ಹೇಳಲಾಗುತ್ತದೆ. ವಿಶೇಷವೇನೆಂದರೆ, ಈ ದೇವಸ್ಥಾನದಲ್ಲಿ ನಾವು ವಿವಿಧ ಶೈಲಿಯ ಸುಂದರವಾದ ವಾಸ್ತುಶಿಲ್ಪ ಮತ್ತು ಕೆತ್ತನೆಗಳನ್ನು ನೋಡಬಹುದು. ಇತಿಹಾಸದ ಪ್ರಕಾರ ಮೊದಲಿನ ಮುಖ್ಯ ದೇವಾಲಯಗಳು ಎಂದರೆ ಅರುಣಾಚಲೇಶ್ವರ ಮತ್ತು ಭೋಗ ನಂದೀಶ್ವರ ದೇವಾಲಯವು ಚೋಳರ ಶೈಲಿಯಲ್ಲಿದ್ದು, ನಂತರದಲ್ಲಿ ಉಮಾ-ಮಹೇಶ್ವರ ದೇವಸ್ಥಾನವನ್ನು ಸ್ಥಾಪಿಸಿದರು ಎಂದು ಹೇಳಲಾಗುತ್ತದೆ. ಇದರ ಮುಂದಿರುವ ಮಂಟಪವನ್ನು ಹೊಯ್ಸಳರು ನಿರ್ಮಿಸಿದ್ದಾರೆ. ಹೊರಭಾಗದ ಕಂಬಗಳಿರುವಂತಹ ನವರಂಗ ಮಂಟಪವನ್ನು ವಿಜಯನಗರ ಕಾಲದಲ್ಲಿ ನಿರ್ಮಿಸಿದ್ದಾರೆ. ಈ ದೇವಸ್ಥಾನವು ಗೃಹಸ್ಥಾಶ್ರಮ ಮತ್ತು ದಾಂಪತ್ಯ ಜೀವನದ ಅನ್ಯೋನ್ಯತೆಯ ಸ್ಪರ್ಶವನ್ನು ಸಾರುವುದರ ಕಾರಣ, ಇದು ನವವಿವಾಹಿತರ ದರ್ಶನಕ್ಕೆ, ಆಶೀರ್ವಾದ ಪಡೆಯುವುದಕ್ಕೆ ಶ್ರೇಷ್ಠವೆಂದು ಹೇಳಲಾಗಿದೆ.

ನಮ್ಮ ಅಧ್ಯಯನಪ್ರವಾಸ ಆ ದೇವಾಲಯಕ್ಕೆ ತೆರಳಿದ ತಕ್ಷಣ, ನನ್ನ ಕಣ್ಮನ ಸೆಳೆದಿದ್ದೇ ಭೋಗ ನಂದೀಶ್ವರ ದೇವಾಲಯ ಮತ್ತು ಅರುಣಾಚಲೇಶ್ವರ ದೇವಾಲಯದ ಮಧ್ಯದಲ್ಲಿರುವ ಉಮಾ-ಮಹೇಶ್ವರ ದೇವಸ್ಥಾನದ ಮುಂದಿರುವ ಭವ್ಯವಾದ ಮಂಟಪ. ಈ ಮಂಟಪದಲ್ಲಿ ಮುಖ್ಯವಾಗಿ ಸೆಳೆಯುವುದು ನಾಲ್ಕೂ ಕಂಬಗಳಲ್ಲಿ ಕಾಣಸಿಗುವ ಕೆತ್ತನೆಗಳು ಹಾಗೂ ಸ್ತ್ರೀಮೂರ್ತಿಗಳು. ಅವುಗಳ ಭಂಗಿ, ಕೈಚಿಹ್ನೆಗಳು, ಒಡವೆ - ವಸ್ತ್ರ, ಕೇಶವಿನ್ಯಾಸ, ನೋಟ, ಮುಖದ ಭಾವ, ವಸ್ತ್ರದ ಮೇಲಿರುವ ಚಿತ್ತಾರಗಳು ಎಲ್ಲವೂ ಅಚ್ಚುಕಟ್ಟಾಗಿ ಕೂರಿಸಿಟ್ಟ ಹಾಗಿದೆ!. ಅವುಗಳ ಬುಡದ ಕಂಬಗಳ ಗಿಳಿಗಳ ಸೃಜನಾತ್ಮಕವಾದ ಮತ್ತು ಜಾಗಕ್ಕನುಗುಣವಾದ ಜೋಡಣೆಯೂ ಬಹುಸುಂದರ. ಇವೆಲ್ಲವು ನನಗೆ ಮಂಟಪದ ಬಗ್ಗೆ ಕುತೂಹಲ ಹೆಚ್ಚಿಸಿದ್ದು ಸುಳ್ಳಲ್ಲ.

ಈ ಮಂಟಪವು ಹೊಯ್ಸಳರ ಕಾಲದ ವಿಶಿಷ್ಟವಾದ ಕಲ್ಯಾಣಮಂಟಪವಂತೆ ! ಇದರ ಒಂದೊಂದು ಕಂಬಗಳಲ್ಲೂ ೧೨೫ ಗಿಳಿಗಳಿವೆ. ಈ ನಾಲ್ಕು ಕಂಬಗಳಲ್ಲಿ ಸುಂದರವಾಗಿ ಯಾರೋ ನಿಂತಂತೆಯೇ ಕಂಡುಬರುವ ಎಂಟು ಕೆತ್ತನೆಗಳನ್ನು ಶಿವ – ಪಾರ್ವತಿ, ಬ್ರಹ್ಮ – ಸರಸ್ವತಿ, ವಿಷ್ಣು – ಲಕ್ಷ್ಮಿ ಮತ್ತು ಅಗ್ನಿ – ಸ್ವಾಹಾದೇವಿಯ ಎಂದು ಅಥವಾ ಇದನ್ನು ಸೌಭಾಗ್ಯದಾಯಕಿಯರಾದ ಅಷ್ಟ ಲಕ್ಷ್ಮಿಯರೆಂದು ಕೂಡ ಪರಿಗಣಿಸಬಹುದು. ಈ ಕಂಬಗಳಲ್ಲಿ ವಿವಿಧ ಭಂಗಿಗಳಲ್ಲಿ ನಮಸ್ಕಾರ ಮಾಡುತ್ತಿರುವ ಚಿಕಣಿ ಶಿಲೆಗಳ ಕೆತ್ತನೆಗಳು, ವಿವಿಧ ವಾದ್ಯಗಳನ್ನು ನುಡಿಸುತ್ತಿರುವ

copyright protected

ಕೆತ್ತನೆ, ನೃತ್ಯದ ಭಂಗಿಗಳು, ರಥದಲ್ಲಿ ಮೆರವಣಿಗೆ ಹೋಗುವಂತಿರುವಂತಹ ಕೆತ್ತನೆ, ಚಪ್ಪರದಂತಿರುವ ಬಳ್ಳಿಗಳ ಕೆತ್ತನೆ, ಗಿಳಿಗಳ ಹಿಂಡು, ಕೃಷ್ಣ, ಸರಸ್ವತಿ, ಲಕ್ಷ್ಮೀ ಮುಂತಾದ ಮೂರ್ತಿಗಳ ಕೆತ್ತನೆ ಮತ್ತು ಸಾಮಾನ್ಯ ಜನರ ನಿಲುವುಗಳನ್ನೂ ಕಾಣುತ್ತೇವೆ. ಮೇಲ್ಛಾವಣಿಯ ಭುವನೇಶ್ವರಿಯೆಂಬ ಗೋಪುಚ್ಛದಾಕಾರದ ಕೆತ್ತನೆ, ಅಲ್ಲಿಂದ ಹೊರಹೊಮ್ಮುವ ಕೀರ್ತಿಮುಖಗಳು, ಸಿಂಹಮುಖಗಳು, ಜೋಡಿಯಾಗಿ ನೃತ್ಯ ಮಾಡುತ್ತಿರುವ ಹಾಗೆ ಹಲವು ದೇವತೆಗಳ ಚಿಕಣಿ ಶಿಲೆಗಳ ಸಾಲನ್ನು ಕಾಣುತ್ತೇವೆ. ಕಂಬಗಳ ಮೇಲೆ ಒಳಭಾಗದಲ್ಲಿ ಒಬ್ಬ ಕುಬ್ಜನೋ, ಕಿನ್ನರನೋ, ಅಥವ ಕಿಂಪುರುಶನೋ ಮೇಲ್ಛಾವಣಿಯನ್ನು ಹೊತ್ತು ನಿಂತು ಭಾರವನ್ನು ತಡೆಯಲಾಗದೆ ಕುಸಿದು ಕೂತಂತೆ ಭಾಸವಾಗುತ್ತದೆ.



(ಚಿತ್ರ ೧: ಭುವನೇಶ್ವರಿ)



(ಚಿತ್ರ ೨: ಕುಬ್ಜಗಣ, ದೇವತೆಗಳ ಚಿಕಣಿ ಕೆತ್ತನಗಳ ಸಾಲು ಮತ್ತು ಗೋಪುಚ್ಛಾಕಾರದ ಕೆತ್ತನೆ)






(ಚಿತ್ರ ೪(ಅ): ಕಂಬದ ಕೆತ್ತನೆಯ ನೋಟ)



(ಚಿತ್ರ ೪(ಆ): ಕಂಬದ ಕೆತ್ತನೆಯ ನೋಟ)










(ಚಿತ್ರ ೫: ಸ್ತ್ರೀಮೂರ್ತಿ)

**ನೂಪುರ ಭ್ರಮರಿ (ರಿ.)  IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. ಮೇ- ಜೂನ್ 2022**

ಇಷ್ಟೆಲ್ಲಾ ಶಿಲ್ಪಸಂಪತ್ತನ್ನು ನಮಗಾಗಿ ನಮ್ಮ ಪೂರ್ವಿಕರು ಕೊಟ್ಟಿದ್ದಾರೆ. ಈಗಿನ ತಲೆಮಾರಿನವರಿಗೆ ಅದರ ಪರಿಚಯ ಮಾಡಿಕೊಡೋಣ. ಅದರ ಜೊತೆಗೆ ನಾವು ನಮ್ಮ ಶಾಸ್ತ್ರ, ಸಂಪ್ರದಾಯಗಳನ್ನು ಎತ್ತಿ ಹಿಡಿಯುವ ಇಂಥ ಯಾವ ಅವಶೇಷಗಳನ್ನು ಬಿಟ್ಟು ಹೋಗುತ್ತಿದ್ದೇವೆ ಎನ್ನುವುದರ ಬಗ್ಗೆಯೂ ಸ್ವಲ್ಪ ಯೋಚನೆ ಮಾಡೋಣ.

**(ಚಿತ್ರಗಳ ಕೃಪೆ: ಶ್ರೀ ವಿಶ್ವನಾಥ್‌ರವರು)**



**ಲೇಖಿಕೆಯ ಪರಿಚಯ**

ಭವಾನಿ ಅವರು, ಗುರು. ಶ್ರಿ. ನಾಗರಾಜ್, ಕರ್ನಾಟಕ ಕಲಾಶ್ರೀ ಗುರು ಬಿ. ಭಾನುಮತಿ ಮತ್ತು ನೃತ್ಯ ನಿಪುಣೆ ಗುರು ಶ್ರೀಮತಿ ಶೀಲಾ ಚಂದ್ರಶೇಖರ್ ಅವರ ಶಿಷ್ಯೆಯಾಗಿದ್ದು, ಪ್ರಸ್ತುತ ಉಪಾಧ್ಯೆ ಸ್ಕೂಲ್ ಆಫ್ ಡಾನ್ಸನಲ್ಲಿ ಕಲಿಯುತ್ತಿದ್ದಾರೆ. ಜೈನ್ ವಿಶ್ವವಿದ್ಯಾಲಯದಲ್ಲಿ ಎಮ್. ಎ ಭರತನಾಟ್ಯ ಮುಗಿಸಿದ ಇವರು ಈ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಇವರು ನೂಪುರಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.

copyright protected

**ನೂಪುರ ಭ್ರಮರಿ (ರಿ.)  IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. ಮೇ- ಜೂನ್ 2022**

copyright protected